**ಪ್ರಾಸಾ - 4**

**ಪ್ರಾಸಾ-4, ಅಲ್ಲಾಭಕ್ಷಿ ಸೊಟಕನಾಳ ರವರನ್ನು ರೂ. 300/- ಗಳ ಖರ್ಚಿನ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 05.11.2024**

**ಪಾಟಿ ಸವಾಲುಃ ಶ್ರೀ ಎಂ ಕೆ ಸಿ ವಕೀಲರಿಂದ ಶ್ರೀ ಸಿ.ಎಸ್. ಸಂಕನಗೌಡರ, ವಕೀಲರ ಪರವಾಗಿಃ**

9. ಪಂಚನಾಮೆಗೆ ಬರಬೇಕೆಂದು ಪೊಲೀಸರು ನನಗೆ ನೋಟೀಸನ್ನು ಠಾಣೆಯಲ್ಲಿ ಕೊಟ್ಟಿರುತ್ತಾರೆ. ಆಗ ಸಂಜೆ 04.00 ಗಂಟೆಯಾಗಿತ್ತು. ನಿಪಿ-10 ನ್ನು ಆ ದಿನ ಸಾಯಂಕಾಲ 05.00 – 06.00 ಗಂಟೆಗೆ ಬರೆಯಲು ಪ್ರಾರಂಭಿಸಲಾಯಿತು ಮತ್ತು ಅದು ಸಂಜೆ 07.00 ಒಳಗೆ ಮುಗಿಯಿತು. ಮುದ್ದೆ ಮಾಲು.8 ಎಲ್ಲ ಕಡೆ ಸಿಗುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಅಲ್ಲಲ್ಲಿ ರಕ್ತ ಹತ್ತಿದ್ದ ಶರ್ಟ್ ಸಿಗುವುದಿಲ್ಲ ಎಂದು ಹೇಳಿರುತ್ತಾರೆ. ಪಂಚನಾಮೆಯನ್ನು ಬರೆಯಲು ಆರೋಪಿಯು ಮಾಹಿತಿಯನ್ನು ಕೊಟ್ಟಿರುತ್ತಾರೆ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

10. ಪೊಲೀಸರು ಹೇಳಿದ ನಂತರ ಆರೋಪಿಯ ಹೆಸರು ನನಗೆ ಗೊತ್ತಾಗಿರುತ್ತದೆ. ಆ ದಿನ ನಾನು ಕೆಲಸದ ನಿಮಿತ್ಯ ಪೊಲೀಸ್ ಠಾಣೆಗೆ ಹೋಗಿದ್ದೆನು. ನನ್ನ ಸ್ನೇಹಿತನ ಮೊಬೈಲ್ ಕಳೆದಿದ್ದರ ಸಂಬಂಧಪಟ್ಟಂತೆ ಆ ದಿನ ನಾನು ಪೊಲೀಸ್ ಠಾಣೆಗೆ ಹೋಗಿದ್ದೆನು.

11. ದಿಃ05.03.2022 ರಂದು ನಿಪಿ-10 ನ್ನು ಮಾಡಲಾಗಿರುತ್ತದೆ. ಆ ದಿನ ಯಾವ ವಾರ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಟೇಲರಿಂಗ್ ಶಾಪ್‌ನ್ನು 2018 ರಲ್ಲಿ ಈದಮಿಲಾದ್ ಹಬ್ಬದ ದಿನದಂದು ಪ್ರಾರಂಭ ಮಾಡಿರುತ್ತೇನೆ ಆದರೆ, ತಾರೀಖು ಮತ್ತು ತಿಂಗಳನ್ನು ನನಗೆ ಹೇಳಲು ಆಗುವುದಿಲ್ಲ. ನಿಪಿ-10 ರ ನಂತರ ನಿಪಿ-11 ನ್ನು ಮಾಡಲಾಗಿರುತ್ತದೆ.

12. ಬರದೂರು ಸಮೀಪವಿರುವ ಚಿಕ್ಕು ತೋಟಕ್ಕೆ ಪೊಲೀಸರು ತಮ್ಮ ಜೀಪನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಫೋಟೋವನ್ನು ತೆಗೆದಾಗ ಸಾಯಂಕಾಲ 04.30 ಗಂಟೆಯ ಮೇಲೆ ಆಗಿತ್ತು. ಸದರಿ ಚಿಕ್ಕು ತೋಟದಿಂದ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಆ ದಿನ ಪೊಲೀಸ್ ಠಾಣೆಯಲ್ಲಿ ನಾನು 4 - 5 ಸಹಿಗಳನ್ನು ಮಾಡಿರುತ್ತೇನೆ. ಸದರಿ ಚಿಕ್ಕು ತೋಟದ ಮುಂಭಾಗದಲ್ಲಿ ಚಾಕು ಇತ್ತು. ನಿಪಿ-9 ಕ್ಕೆ ಮಾಹಿತಿಯನ್ನು ಆರೋಪಿಯು ಕೊಟ್ಟಿರುತ್ತಾರೆ. ಸದರಿ ಚಿಕ್ಕು ತೋಟದಿಂದ ವಾಪಾಸ್ ಠಾಣೆಗೆ ಹೋದ ನಂತರ ಆರೋಪಿಯು ತನ್ನ ಮೈಮೇಲಿನ ಬಟ್ಟೆಗಳನ್ನು ತೆಗೆದು ಕೊಟ್ಟಿರುತ್ತಾರೆ.

**(ಈಗ ಸಮಯ ಮದ್ಯಾಹ್ನ 02.00 ಗಂಟೆಯಾಗಿರುವುದರಿಂದ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು.)**

**ಸಾಕ್ಷಿಯನ್ನು ಮದ್ಯಾಹ್ನ 02.45 ಗಂಟೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಪಾಟಿ ಸವಾಲುಃ ಶ್ರೀ ಎಂ ಕೆ ಸಿ ವಕೀಲರಿಂದ ಶ್ರೀ ಸಿ.ಎಸ್. ಸಂಕನಗೌಡರ, ವಕೀಲರ ಪರವಾಗಿಃ

13. ನಿಪಿ-11 ನ್ನು ಮಾಡಿದಾಗ ರಾತ್ರಿ 11.00 ಗಂಟೆಯಾಗಿತ್ತು. ಮುದ್ದೆ ಮಾಲು 2 ರಿಂದ 4 ರಂತಹ ವಸ್ತುಗಳು ಎಲ್ಲ ಕಡೆಗೆ ಸಿಗುತ್ತವೆ. ಮುದ್ದೆಮಾಲು 6 ಮತ್ತು 7 ರಂತಹ ವಸ್ತುಗಳು ಎಲ್ಲ ಕಡೆಗೆ ಸಿಗುತ್ತವೆ ಎಂದರೆ ಸರಿ. ಪೊಲೀಸರು ಹೇಳಿದ ನಂತರ, ಮು ಮಾ 2 ರಿಂದ 4 ಮೃತನ ಮೈಮೇಲಿನ ಬಟ್ಟೆಗಳು ಎಂದು ಗೊತ್ತಾಗಿರುತ್ತವೆ ಎಂದರೆ ಸರಿ. ನಾನು ಪೊಲೀಸರು ಹೇಳಿಕೊಟ್ಟಂತೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮುದ್ದೆ ಮಾಲುಗಳನ್ನು ಪಂಚನಾಮೆಗಳ ಮೂಲಕ ಜಪ್ತಿ ಮಾಡಿ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

14. ಈಗ ಸುಮಾರು 2 ವರ್ಷಗಳ ಹಿಂದೆ ನಾನು ಮುಂಡರಗಿ ಪೊಲೀಸ್ ಠಾಣೆಗೆ ಹೋದಾಗ ನನ್ನನ್ನು ಮತ್ತು ಚಾಸಾ-7 ರವರನ್ನು ಪಂಚನಾಮೆಗೆ ಎಂದು ಕರೆಸಿರುತ್ತಾರೆ ಮತ್ತು ಅಲ್ಲಿ ನ್ಯಾಯಾಲಯದ ವಿಸಿಯಲ್ಲಿ ಕಾಣಿಸುವ ಆರೋಪಿಯು ಇದ್ದರು ಮತ್ತು ನಮ್ಮ ಸಮಕ್ಷಮ ಆರೋಪಿಯ ಹೆಸರನ್ನು ಪೊಲೀಸರು ಕೇಳಿದಾಗ, ಆತನು ತನ್ನ ಹೆಸರನ್ನು ವಿಷ್ಣು ಪವಾರ ಎಂದು ತನ್ನ ಮತ್ತು ತನ್ನ ಹೆಂಡತಿಯ ಜಗಳವಿದ್ದು, ತಾನು ಅತ್ತಿಕಟ್ಟಿ ತಾಂಡಾದ ನಾಯಕನಿಗೆ ಚಾಕುವಿನಿಂದ ಚುಚ್ಚಿ ಸಾಯಿಸಿರುವುದಾಗಿ ಮತ್ತು ಸದರಿ ಚಾಕುವನ್ನು ಮತ್ತು ಇನ್ನೊಂದು ಮಚ್ಚನ್ನು ಒಂದು ಕಡೆಗೆ ಮುಚ್ಚಿಟ್ಟಿರುವುದಾಗಿ ತನ್ನ ಜೊತೆಗೆ ಬಂದರೆ ತೋರಿಸುವುದಾಗಿ ಹೇಳಿರುತ್ತಾರೆ ಮತ್ತು ಆಗ ಆರೋಪಿಯು ರಕ್ತದ ಕಲೆ ಇರುವ ಫುಲ್ ತೋಳಿನ ಶರ್ಟನ್ನು ಮೃತನಿಗೆ ಚಾಕುವಿನಿಂದ ಚುಚ್ಚುವಾಗ ಧರಿಸಿದ್ದ ಶರ್ಟು ಎಂದು ಹೇಳಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಆನಂತರ, ಸಂಜೆ 04.15 ಕ್ಕೆ ನಾನು, ಸಿಪಿಐ, ಪೊಲೀಸ್ ಸಿಬ್ಬಂದಿ, ಆರೋಪಿ ಹಾಗೂ ಚಾಸಾ-7 ರವರು ಸೇರಿ ಬರದೂರು ಸಮೀಪವಿರುವ ಒಂದು ಚಿಕ್ಕುತೋಟದ ಎದುರಿಗೆ ರಸ್ತೆಯ ಬದಿಯಲ್ಲಿ ಮುಳ್ಳಿನ ಕಂಟಿಯ ಕೆಳಗೆ ಬಚ್ಚಿಟ್ಟಿದ್ದ ಚಾಕು ಮತ್ತು ಮಚ್ಚನ್ನು ತೆಗೆದು ಹಾಜರುಪಡಿಸಿರುತ್ತಾನೆ ಮತ್ತು ಸದರಿ ಚಾಕು ಮತ್ತು ಮಚ್ಚನ್ನು ಆರೋಪಿಯು ನನ್ನ ಕೈಗೆ ಕೊಟ್ಟಿರುತ್ತಾನೆ ಮತ್ತು ನಂತರ, ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ನ್ನು ಸ್ಥಳದಲ್ಲಿಯೇ ಲ್ಯಾಪಟಾಪ್ ಮೂಲಕ ತಯಾರಿಸಲಾಗಿದ್ದು, ನಾನು ಅದಕ್ಕೆ ಸ್ಥಳದಲ್ಲಿಯೇ ಸಹಿಗಳನ್ನು ಮಾಡಿರುತ್ತೇನೆ ಮತ್ತು ನನ್ನ ಜೊತೆಗೆ ಚಾಸಾ-7 ರವರು ಸಹ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ ಮತ್ತು ಆಗ ಆರೋಪಿಯು ಕೂಡ ನಿಪಿ-9 ಕ್ಕೆ ಸಹಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಆರೋಪಿಯು ಕೊಟ್ಟಂತಹ ಮು.ಮಾ.6 ಮತ್ತು 7 ನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ ಮತ್ತು ನಿಪಿ-9 ನ್ನು ಸಂಜೆ 04.30 – 05.30 ಗಂಟೆಯವರೆಗೆ ಮಾಡಲಾಗಿರುತ್ತದೆ ಮತ್ತು ನಂತರ, ನಾವೆಲ್ಲರೂ ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಮುಂಡರಗಿ ಪೊಲೀಸ್ ಠಾಣೆಗೆ ವಾಪಾಸ್ ಬಂದ ನಂತರ, ಆರೋಪಿಯ ತಾನು ಕೊಲೆ ಮಾಡುವ ಸಮಯದಲ್ಲಿ ಹಾಕಿಕೊಂಡಿದ್ದ ಆಕಾಶ ನೀಲಿ ಬಣ್ಣದ ರಕ್ತ ಹತ್ತಿದ್ದ ಫುಲ್ ಶರ್ಟನ್ನು ಕಳಚಿ ನನ್ನ ಕೈಗೆ ಕೊಟ್ಟಿರುತ್ತಾನೆ ಮತ್ತು ನಾನು ಅದನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ ಮತ್ತು **ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ** ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-13 ಫೋಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟ ಆಗಿರುತ್ತದೆ ಮತ್ತು ನಿಪಿ-14 ಫೋಟೋ ಆರೋಪಿಯು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಫುಲ್ ತೋಳಿನ ಶರ್ಟನ್ನು ಬಿಚ್ಚಿ ಕೊಡುವ ಸಮಯದಲ್ಲಿ ತೆಗೆದ ಫೋಟೋ ಆಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೀಟಿಯ ಮೇಲೆ ಚಾಸಾ-7 ರವರು ಸಹ ತಮ್ಮ ಸಹಿಯನ್ನು ಮಾಡಿರುತ್ತಾರೆ ಮತ್ತು ಆರೋಪಿಯ ಮೈಮೇಲಿನ ಶರ್ಟನ್ನು ಜಪ್ತಿ ಮಾಡುವ ಪಂಚನಾಮೆಯನ್ನು ಸಂಜೆ 06.00 – 07.00 ವರೆಗೆ ಬರೆಯಲಾಗಿರುತ್ತದೆ ಮತ್ತು ಪಂಚನಾಮೆಯನ್ನು ಠಾಣೆಯಲ್ಲಿಯೇ ತಯಾರಿಸಲಾಗಿರುತ್ತದೆ ಮತ್ತು ನಾನು ಠಾಣೆಯಲ್ಲಿಯೇ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ ಮತ್ತು ನನ್ನ ಜೊತೆಗೆ ಚಾಸಾ-7 ರವರು ಸಹ ಸಹಿಯನ್ನು ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಿಪಿ-10 ರ ನಂತರ, ನಾನು ನನ್ನ ಅಂಗಡಿಗೆ ಹೋಗಿದ್ದು, ಪೊಲೀಸರು ನನಗೆ ಪುನಃ ಪೊಲೀಸ್ ಠಾಣೆಗೆ ಬರಬೇಕು ಎಂದು ತಿಳಿಸಿದ್ದರಿಂದ ನಾನು ಪೊಲೀಸ್ ಠಾಣೆಗೆ ಬಂದಿರುತ್ತೇನೆ ಮತ್ತು ಆಗ ಚಾಸಾ-7 ರವರು ಕೂಡ ಬಂದಿದ್ದರು ಮತ್ತು ಆಗ ಪೊಲೀಸ್ ಸಿಬ್ಬಂದಿಯವರು ಮೃತನ ಮೈಮೇಲಿನ ಬಟ್ಟೆಗಳಾದ ಒಂದು ಕತ್ತರಿಸಿ ತೆಗೆದ ಫುಲ್ ತೋಳಿನ ಬನಿಯನ್ ಅಲ್ಲಲ್ಲಿ ರಕ್ತ ಹತ್ತಿದ್ದು, ಒಂದು ಪಟ್ಟಾಪಟ್ಟಿ ಚಡ್ಡಿ ಅದರಲ್ಲಿ ಅಲ್ಲಲ್ಲಿ ರಕ್ತ ಹತ್ತಿದ್ದು ಮತ್ತು ಒಂದು ಬಿಳಿ ಬಣ್ಣದ ಲುಂಗಿ ಅಲ್ಲಲ್ಲಿ ರಕ್ತ ಹತ್ತಿದ್ದು ತಂದು ಚಾಸಾ-29 ಮತ್ತು ನಮ್ಮ ಮುಂದೆ ಹಾಜರುಪಡಿಸಿರುತ್ತಾರೆ ಮತ್ತು ಅವುಗಳನ್ನು ಒಂದೊಂದು ಕವರಿನಲ್ಲಿ ಪ್ರತ್ಯೇಕವಾಗಿ ಹಾಕಿ ಸೀಲ್ ಮಾಡಲಾಗಿರುತ್ತದೆ ಮತ್ತು ಮು.ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಸಹಿಗಳು ಇರುತ್ತವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-2 ರಿಂದ 4 ರ ಮೇಲೆ ಅಂಟಿಸಿದ ಚೀಟಿಯ ಮೇಲೆ ಚಾಸಾ-7 ರವರ ಸಹಿಗಳು ಸಹ ಇರುತ್ತವೆ ಮತ್ತು ನಿಪಿ-11 ನ್ನು ರಾತ್ರಿ 09.30 ರಿಂದ 10.30 ವರೆಗೆ ಮಾಡಲಾಗಿರುತ್ತದೆ ಮತ್ತು ನಿಪಿ-11 ನ್ನು ಠಾಣೆಯಲ್ಲಿಯೇ ಗಣಕೀಕರಣ ಮಾಡಲಾಗಿದ್ದು, ನಾನು ಮತ್ತು ಚಾಸಾ-7 ರವರು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಆರೋಪಿಯು ಈ ಪ್ರಕರಣದ ಬಗ್ಗೆ ನನ್ನ ಮುಂದೆ ಏನನ್ನೂ ಹೇಳದೇ ಇದ್ದರೂ ಸಹ ಪೊಲೀಸರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ಪೊಲೀಸರು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**